ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಎಂ ನಾಗರಾಜು ರವರು
ಪ್ರಶ್ನೆವೇಳೆಯಲ್ಲಿ ನೀಡಿರುವ ಸೂಚನೆಗೆ ಉತ್ತರ

ವಿಷಯ: ದಿನಾಂಕ: 02.12.2023 (ಶನಿವಾರ)ರ ಉದಯವಾಣಿ ದಿನಪತ್ರಿಕೆಯಲ್ಲಿ "ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುವ ದುಷ್ಕರ್ಮಿಗಳ ಪತ್ತೆ ವಿಳಂಬ ಬೇಡ" ಎಂಬ ವಿಚಾರವು ವರದಿಯಾಗಿರುತ್ತದೆ.

ರಾಜಧಾನಿ ಹಾಗೂ ಸುತ್ತಲಿನ 68 ಪ್ರತಿಷ್ಠಿತ ಶಾಲೆಗಳ ಆವರಣದಲ್ಲಿ ಸ್ಫೋಟಕ ವಸ್ತುಗಳನ್ನಿಡಲಾಗಿದೆ ಎಂಬ ಅನಾಮಧೇಯ ಇ-ಮೇಲ್‌ವೊಂದು ಇಡೀ ದಿನ ಬೆಂಗಳೂರಿನ ನಾಗರೀಕರನ್ನು ಆತಂಕಕ್ಕೆ ದೂಡಿತ್ತು. ಅದರಲ್ಲೂ ವಿಶೇಷವಾಗಿ ಇ-ಮೇಲ್ ಸ್ವೀಕರಿಸಿದ ಶಾಲೆಗಳ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಅನುಭವಿಸಿದ ಭಯ-ಬೀತಿ-ಆತಂಕವನ್ನು ಯಾವುದೇ ಪದಗಳಲ್ಲಿ ವಿವರಿಸಲು ಸಾಧ್ಯವೇ ಇಲ್ಲ. ಮುಂಜಾನೆ ಸಮಯ 6.08ಕ್ಕೆ ಇ-ಮೇಲ್ ಸಂದೇಶ ಶಾಲೆಗಳಿಗೆ ತಲುಪಿದೆ. ಆದರೆ ಇ-ಮೇಲ್ ಸಂದೇಶವನ್ನು ಶಾಲಾ ಆಡಳಿತ ಮಂಡಳಿಗಳು ಸುಮಾರು 8.30ರ ವೇಳೆಗೆ ನೋಡುವಷ್ಟರಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಾಲೆಗಳ ಒಳಗಡೆ ಸೇರಿದ್ದರು. ಪೊಲೀಸರಿಗೆ ವಿಷಯ ತಿಳಿಯುತ್ತಿದ್ದಂತೆ ಬಾಂಬ್ ನಿಷ್ಕ್ರೀಯ ದಳ ತಪಾಸಣೆ ನಡೆಸಿದಾಗ ಎಲ್ಲಿಯೂ ಯಾವುದೇ ರೀತಿಯ ಸ್ಫೋಟಕ ವಸ್ತುಗಳು ಪತ್ತೆಯಾಗಲಿಲ್ಲ. ಇದೊಂದು ಹುಸಿ ಬಾಂಬ್ ಕರೆ ಎಂದು ಖಚಿತವಾದ ಬಳಿಕ ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಆದರೆ ಅಷ್ಟೊತ್ತಿಗಾಗಲೇ ಶಾಲೆಗಳಿಗೆ ಮಕ್ಕಳನ್ನು ಬಿಟ್ಟು ಮನೆ ಇಲ್ಲವೇ ಕಛೇರಿಗಳಿಗೆ ತೆರಳಿದ್ದ ಪೋಷಕರಿಗೆ ಸುದ್ದಿ ಮುಟ್ಟುತ್ತಿದ್ದಂತೆ ಹೈರಾಣಾಗಿದ್ದರು.

ಒಂದಲ್ಲ-ಎರಡಲ್ಲ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ ವ್ಯಾಪ್ತಿಗೆ ಸೇರಿದ ಒಟ್ಟು 68 ಶಾಲೆಗಳಿಗೆ ಮುಜಾಹಿದ್ದೀನ್ ಸಂಘಟನೆ ಹೆಸರಲ್ಲಿ ಬಾಂಬ್ ಬೆದರಿಕೆ ಇ-ಮೇಲ್ ರವಾನಿಸಲಾಗಿದೆ. ಅದರಲ್ಲಿಯೂ ಮುಂಬಾಯಿಯ ತಾಜ್ ಹೋಟೆಲ್ ಮೇಲೆ ನಡೆದ ದಾಳಿಯಂತೆ ದಾಳಿ ಮಾಡುತ್ತೇವೆ. ಎಲ್ಲರೂ ಇಸ್ಲಾಂಗೆ ಮತಾಂತರಗೊಳ್ಳಲು ಸಿದ್ದರಾಗಿ ಇಲ್ಲವೇ ಸಾಯಲು ರೆಡಿಯಾಗಿರಿ ಎಂದು ಧರ್ಮದ ಹೆಸರಲ್ಲಿ ಬೆದರಿಸಿ ಬರೆಯಲಾಗಿದೆ. ಇದೊಂದು ನಿಜಕ್ಕೂ ಆತಂಕಕಾರಿ ಬೆಳವಣಿಗೆ ಎಂಬ ಸುದ್ದಿ ಪ್ರಕಟವಾಗಿರುವ ಕುರಿತು ಹಾಗೂ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಯಲ್ಲಿ ವಿಳಂಬ ಮಾಡದೇ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆ ವಿಧಿಸಲು ಸರ್ಕಾರವು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂಬುದರ ಕುರಿತು.

ಉತ್ತರ: ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ದಿನಾಂಕ: 02.12.2023 ರಂದು ಬೆಂಗಳೂರು ನಗರದ ವ್ಯಾಪ್ತಿಗೆ ಒಳಪಟ್ಟ ಹಲವು ಶಾಲೆಗಳಿಗೆ ಬಂದಂತಹ ಇ-ಮೇಲ್ ಬೆದರಿಕೆ ಪತ್ರದ ಕುರಿತು ಶಾಲಾ ಆಡಳಿತ ಮಂಡಳಿ ರವರುಗಳಿಂದ ದೂರುಗಳನ್ನು ಪಡೆದು 27 ಪ್ರಕರಣಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ದಾಖಲು ಮಾಡಿಕೊಳ್ಳಲಾಗಿರುತ್ತದೆ. ಇ-ಮೇಲ್ ಐ.ಡಿ ಆಧಾರದ ಮೇಲೆ ಸಂಬಂಧಪಟ್ಟ ಕಂಪನಿಯವರಿಗೆ ಪತ್ರ ವ್ಯವಹಾರ ಮಾಡಿ ಇ-ಮೇಲ್ ಐ.ಡಿ ಯಾರದ್ದು ಎನ್ನುವುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಬೆಂಗಳೂರು ನಗರ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿರುವ ನುರಿತ ತಾಂತ್ರಿಕ ಪರಿಣಿತರು ಈ ಪ್ರಕರಣದ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ನೀಡುತ್ತಿದ್ದಾರೆ. ದಿನಾಂಕ:04.12.2023 ರಂದು ಈ ಎಲ್ಲಾ 27 ಪ್ರಕರಣಗಳ ತನಿಖಾಧಿಕಾರಿಗಳ ಸಭೆಯನ್ನು ಪೊಲೀಸ್ ಆಯುಕ್ತರು ಅಧ್ಯಕ್ಷತೆಯಲ್ಲಿ ನೆಡಸಿದ್ದು ಎಲ್ಲಾ ತನಿಖಾಧಿಕಾರಗಳಿಗೆ ಸೂಕ್ತ ಸಲಹೆ-ಸೂಚನೆಗಳನ್ನು ನೀಡಲಾಗಿರುತ್ತದೆ. ಶಾಲೆಗಳಿಗೆ ಸ್ಫೋಟಕ ವಸ್ತುವನ್ನು ಇಡಲಾಗಿದೆ ಎಂಬ ಹುಸಿ ಬಾಂಬ್ ಬೆದರಿಕೆ ಸಂಬಂಧ ಈ ಹಿಂದೆ ದಾಖಲಿಸಲಾಗಿದ್ದ 27 ಪ್ರಕರಣಗಳೊಂದಿಗೆ ದಿನಾಂಕ:06.12.2023 ರಂದು 04 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಈ ಎಲ್ಲಾ 31 ಪ್ರಕರಣಗಳ ತನಿಖೆ ಏಕರೂಪವಾಗಿರಲು ಮತ್ತು ತ್ವರಿತವಾಗಿ ತನಿಖೆಯನ್ನು ಕೈಗೊಳ್ಳಲು ಜಂಟಿ ಪೊಲೀಸ್ ಆಯುಕ್ತರು, ಅಪರಾಧ ರವರ ನೇತೃತ್ವದಲ್ಲಿ ಎಲ್ಲಾ ತನಿಖಾಧಿಕಾರಿಗಳ ತಂಡವನ್ನು ರಚಿಸಲಾಗಿದ್ದು, ಅವರ ನೇರ ಮೇಲುಸ್ತುವಾರಿಯಲ್ಲಿ ತನಿಖೆ ಪ್ರಗತಿಯಲ್ಲಿರುತ್ತದೆ. ಇ-ಮೇಲ್ ವಿಳಾಸ ಕಳುಹಿಸಿರುವ ಐ.ಪಿ ವಿಳಾಸ ಮತ್ತು ಸರ್ವರ್‌ಗಳ [illegible]ಗಳನ್ನು ಪಡೆಯಲಾಗಿ, ಈ ಕೃತ್ಯದಲ್ಲಿ ಯಾವುದಾದರೂ ವಿದೇಶಿ ವ್ಯಕ್ತಿ ಅಥವಾ ಸಂಘಟನೆಯ ಪಾತ್ರ ಇದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲಾಗುತ್ತಿದೆ. ಕೃತ್ಯದಲ್ಲಿ ವಿದೇಶಿ ಐ.ಪಿ ವಿಳಾಸ ಅಥವಾ

Scanned with CamScanner

ಸರ್ವರ್ ಬಳಕೆಯ ಕುರಿತಂತೆ ಮಾಹಿತಿಯನ್ನು ಸಿ.ಐ.ಡಿ ಘಟಕದ ಮೂಲಕ ಇಂಟರ್‌ಪೋಲ್‌ಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ.

ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ದಿನಾಂಕ:01.12.2023 ರಂದು ಬೆಂಗಳೂರು ಜಿಲ್ಲಾ ಸರಹದ್ದಿನ 6 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ 22 ಶಾಲೆಗಳಿಗೆ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಸಂದೇಶವನ್ನು ಇ-ಮೇಲ್ ಮುಖಾಂತರ ಜಿಲ್ಲೆಯ ವಿವಿಧ ಶಾಲೆಗಳಿಗೆ ಕಳುಹಿಸಿದ್ದು ತಕ್ಷಣದಲ್ಲಿ ಎಲ್ಲಾ ಶಾಲೆಗಳಿಗೆ ಬಾಂಬ್ ನಿಷ್ಕ್ರಿಯ ದಳ ಹಾಗೂ ಡಾಗ್ ಸ್ಕ್ವಾಡ್ ಅನ್ನು ಕಳುಹಿಸಿ ತಪಾಸಣೆ ಕೈಗೊಂಡು ಯಾವುದೇ ಬಾಂಬ್ ಇಲ್ಲದಿರುವುದನ್ನು ದೃಢಪಡಿಸಿಕೊಂಡಿರುತ್ತದೆ. ಇ-ಮೇಲ್ ಸಂದೇಶ ಸ್ವೀಕೃತವಾದ 22 ಶಾಲೆಗಳಿಂದ 8 ಎಫ್‌ಐಆರ್‌ಗಳನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತದೆ. ಹೆಚ್ಚಿನ ಮಾಹಿತಿ ಕಲೆ ಹಾಕಲು ಇಂಟರ್‌ಪೋಲ್ ಇಲಾಖೆಗೆ ಪತ್ರವನ್ನು ಸಮುಚಿತ ಮಾರ್ಗದಲ್ಲಿ ಕಳುಹಿಸಲಾಗಿದೆ ಹಾಗೂ ಇ.ಮೇಲ್ ಐ.ಡಿ.ಯ khariijites@beeble.com ಬಗ್ಗೆ ಎಡಿಜಿಪಿ, ಸಿ.ಐ.ಡಿ. ಮತ್ತು ಸಮನ್ವಯ ಅಧಿಕಾರಿ ಇಂಟರ್‌ಪೋಲ್‌ಗೆ ಮನವಿ ಸಲ್ಲಿಸಿದ್ದು, ಇಂಟರ್‌ಪೋಲ್‌ನಿಂದ ಮಾಹಿತಿ ಸಂಗ್ರಹಿಸಿ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುತ್ತದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ತನಿಖೆ ಕೈಗೊಳ್ಳಲಾಗುತ್ತಿದೆ.

---

**ಹೆಚ್‌ಡಿ 389 ಕೆಎಎ 2023**

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು

Scanned with CamScanner